ರಾಘವೇಂದ್ರ ಗುರು ರಾಯರ ಸೇವಿಸಿರೋ ಸೌಖ್ಯದಿ ಜೀವಿಸಿರೋ ||ಪ||

ತುಂಗಾತೀರದಿ ರಘುರಾಮನ ಪೂಜಿಸಿರೋ ನರಸಿಂಘನ ಭಜಕರೋ ||ಅಪ||

ಶ್ರೀ ಸುಧೀಂದ್ರ ಕರ ಸರೋಜ ಸಂಜಾತ ಜಗದೊಳಗೆ ಪುನೀತ
ದಶರಥಿಯ ದಶತ್ವವ ತಾ ವಹಿಸಿ ದುರ್ಮತಿಗಳ ಜಯಿಸಿ
ಈ ಸಮೀರ ಮತ ಸಂಸ್ಥಾಪಕರಾಗಿ ನಿಂದಕರನು ನೀಗಿ
ಭೂಸುರರಿಗೆ ಸಂಸೇವ್ಯ ಸದಾಚರಣೇ ಕಂಗೊಳಿಸುವ ಕರುಣಿ ||೧||

ಕುಂದದ ವರ ಮಂತ್ರಾಲಯದಲ್ಲಿರುವ ಕರೆದಲ್ಲಿಗೆ ಬರುವ
ಬೃಂದಾವನಗತ ಮೃತ್ತಿಕೆ ಜಲಪಾನ ಮುಕುತಿಗೆ ಸೋಪಾನ
ಸಂದರುಶನಮಾತ್ರದಲಿ ಮಹಾತಾಪ ಬಡಿದೋಡಿಸಲಾಪ
ಮಂದಭಾಗ್ಯರಿಗೆ ದೊರೆಯದಿರುವ ಸೇವೆ ಶರಣರ ಸಂಜೀವಾ ||೨||

ಶ್ರೀದ ವಿಠಲನ ಸನ್ನಿಧಾನ ಪಾತ್ರ ಸಂಸ್ತುತಿಸಲು ಮಾತ್ರ
ಮೋದ ಪಡಿಸುತಿಹ ತಾನಿಹಪರದಲ್ಲಿ ಇತಗೆ ಸರಿಯಿಲ್ಲಿ
ಮೇದಿನಿಯೊಳಗಿನ್ನರಸಲು ನಾ ಕಾಣೆ ಪುಸಿಯಲ್ಲಾಣೆ
ಪಾದಸ್ಮರಣೆಯ ಮಾಡದವನೆ ಪಾಪಿ ನಾ ಪೇಳುವೆ ಸ್ತುಪಿ ||೩||